ಪ್ರಮಾಣೀಕರಿಸಲಾದ ದಿನಾಂಕಃ- **25.10.2025.**

<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ. ಎಸ್. ಡಿ. ಡಿ. ವಕೀಲರಿಂದಃ-</u>

ನನಗೆ ಅಂಗಡಿ ಇದೆ ಎಂದು ತೋರಿಸಲು ನಾನು ಅಂಗಡಿ ದಾಖಲೆಗಳನ್ನು ಕೊಟ್ಟಿರುತ್ತೇನೆ. ಇದೇ ದೂರುದಾರರು ಇನ್ನೊಂದುಚೆಕ್ ಪ್ರಕರಣ ನನ್ನ ಮೇಲೆ ಹಾಕಿದ್ದಾರೆ ಎಂದರೆ ಸರಿ. ನಾನು ಮತ್ತು ನನ್ನ ಗಂಡ ಇವರ ಮನೆಗೆ ಗಾರೆ ಕೆಲಸಕ್ಕೆ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಈ ರೀತಿ ಅವರ ಪರಿಚಯವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಇಟ್ಟಿರುವ ಅಂಗಡಿ ಇಡಲು ದೂರುದಾರರ ಹಣ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದೂರುದಾರರಿಂದ ಸಾಲವನ್ನೇ ಪಡೆದಿಲ್ಲ. ಸೆಪ್ಟೆಂಬರ್ 2020 ರಲ್ಲಿ ರೂ. 2 ಲಕ್ಷ ಹಣ ಸಾಲ ಕೇಳಿದ್ದೆ ಎಂದರೆ ಸರಿಯಲ್ಲ. ಮೊದಲನೇ ವಾರ ಅಕ್ಟೋಬರ್ 2020 ರಲ್ಲಿ ರೂ. 1 ವರೆ ಲಕ್ಷ ಹಣ ಸಾಲ ನೀಡಿದ್ದಾರೆ ಎಂದರೆ ಸರಿಯಲ್ಲ. ಮತ್ತೆ ನವೆಂಬರ್ 2020 ರಲ್ಲಿ ರೂ. 2 ಲಕ್ಷ ಹಣ ಮತ್ತೇ ಬೇಕು ಎಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ನವೆಂಬರ್ 2020 ರಲ್ಲಿ ರೂ. 1 ಲಕ್ಷ ಹಣ ನಗದು ಸಾಲವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಡಿಸೆಂಬರ್ 2020 ರಲ್ಲಿ ಇನ್ನೊಬ್ಬರನ್ನು ಕರೆದುಕೊಂಡು ಹೋಗಿ ದೂರುದಾರರಿಂದ ರೂ. 1 ವರೆ ಲಕ್ಷ ಹಣ ಕೇಳಿ ಸಾಲ ಪಡೆದೆ ಎಂದರೆ ಸರಿಯಲ್ಲ. ಒಟ್ಟು ರೂ. 5 ಲಕ್ಷ ಹಣ ಇವರಿಂದ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ.

ನಿ. ಪಿ. 3 ನನಗೆ ಜಾರಿಯಾಗಿರುವುದು ಸರಿ. ದಿ.15.02.2021 ರಂದು ನಾನು ಈ ನೋಟೀಸ್ ಅನ್ನು ಪಡೆದಿರುತ್ತೇನೆ ಎಂದರೆ, ದಿನಾಂಕ ನೆನಪಿಲ್ಲ. ನಾನು ಈ ನೋಟೀಸ್‌ಗೆ ಉತ್ತರ ಕೊಟ್ಟಿದ್ದೇನೆ. ದೂರುದಾರರ ನನಗೆ ಪರಿಚಯವಿಲ್ಲ, ಅವರಿಂದ ಯಾವುದೇ ಸಾಲ ಪಡೆದಿಲ್ಲ ಎಂದು ಉತ್ತರ ಕೊಟ್ಟಿರುತ್ತೇನೆ. ನನ್ನ ಸಾಕ್ಷ್ಯದಲ್ಲಿ ಹೇಳಿರುವ ಸಬೀತಾರವರು ಇನ್ನೊಂದು ಚೆಕ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಒಟ್ಟು 3 ಚೆಕ್ ಪ್ರಕರಣಗಳು ಇವರೇ ಹಾಕಿರುತ್ತಾರೆ. 2013 ರಲ್ಲಿ ಅಂಗಡಿ ಇರುವ ಬಗ್ಗೆ ದಾಖಲೆ ಕೊಟ್ಟಿಲ್ಲ. ಅಂತಹ ಅಂಗಡಿ 2013 ರಲ್ಲಿ ತೆರೆದಿರುವುದಿಲ್ಲ, ಆದ್ದರಿಂದ ದಾಖಲೆ ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಡೆದ ಸಾಲ ಮರುಪಾವತಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಮತ್ತು

ದೂರುದಾರರಿಂದ ಪಡೆದಿರುವ ಸಾಲಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ಕೆನರಾ ಬ್ಯಾಂಕ್ ಪೊನ್ನಂಪೇಟೆಯಲ್ಲಿ ಖಾತೆ ಇದೆ, ಆ Bank statement ಹಾಜರುಪಡಿಸಲು ತೊಂದರೆ ಇಲ್ಲ. ನಿ. ಪಿ. 1(ಎ) ಸಹಿ ನನ್ನದೇ. ರೂ. 5 ಲಕ್ಷ ಹಣ ಮರುಪಾವತಿಗೆ ದೂರುದಾರರಿಗೆ ಸಹಿ ಮಾಡಿದ ಈ ಚೆಕ್ ನೀಡಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ಮರುಪಾವತಿ ಮಾಡಲು ನಾನು ಬಾಧ್ಯಸ್ಥಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ